# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 26-09-2022

## ಮಾರ್ಕೆಟ ಪೊಲೀಸ ಠಾಣೆ ಅಪರಾಧ ಸಂಖ್ಯೆ 75/2022 ಕಲಂ 379 ಐಪಿಸಿ :-

ದಿನಾಂಕ 25-09-2022 ರಂದು 1300 ಗಂಟೆಗೆ ಫಿರ್ಯಾದಿ ಶ್ರೀ ಮಹ್ಮದ ನಬಿ ತಂದೆ ಮಹ್ಮದ ಲೈಕ ಅಲಿ ವಯ 39 ವರ್ಷ ಜಾತಿ ಮುಸ್ಲಿಂ ಉ;ಬೀದರ ಉಪ ನೋಂದಣಾ ಕಛೇರಿಯಲ್ಲಿ ಗುತ್ತಿಗೆ ಅಧಾರದ ಮೇರೆಗೆ ಕಂಪ್ಯೋಟರ ಅಪರೇಟರ ಕೆಲಸ ಸಾ:ಶಾಸ್ತ್ರಿ ಇವರು ನಿಡೀದ ಸಾರಾಂಶವೆನಂದರೆ, ಇವರ ಹತ್ತಿರ ಹಿರೊ ಹೊಂಡಾ ಫ್ಯಾಷನ್ ಪ್ರೋ ದ್ವಿಚಕ್ರವಾಹನ.ನಂ.ಕೆ.ಎ.38-ಎಲ್-9250 ನೇದ್ದು ಇದ್ದು ಇದು ಕೆಂಪು ಬಣ್ಣದು ಇರುತ್ತದೆ. ಇದರ ಚೆಸ್ಸಿ.ನಂಎಮ್ ಬಿಎಲ್ ಹೆಚ್ ಇಜೆ10ಡಬ್ಲುಜಿಸಿ30598 ಇದ್ದು ಇದರ ಇಂಜಿನ್.ನಂ.ಹೆಚ್ ಎ10ಡಿಸಿಜಿ ಸಿ57305 ಇದ್ದು ಇದು 2012 ನೇ ಸಾಲಿನ ಮೊಡಲದು ಇರುತ್ತದೆ. ಇದರ ಅ.ಕಿ .45000/-ರೂ ಇರುತ್ತದೆ. ಹೀಗಿರುವಾಗ ದಿನಾಂಕ 06-08-2022 ರಂದು 0900 ಗಂಟೆಯ ಸುಮಾರಿಗೆ ತನ್ನ ದ್ವಿಚಕ್ರ ವಾಹನದ ಮೇಲೆ ಕಛೇರಿಗೆ ಹೋಗಿ ಬೀದರ ಜಿಲ್ಲಾಧಿಕಾರಿಗಳ ಕಛೇರಿಯ ಆವರಣದಲ್ಲಿರುವ ವಾಹನಗಳ ಪಾರ್ಕಿಂಗನಲ್ಲಿ ದ್ವಿಚಕ್ರವಾಹನವನನು ನಿಲ್ಲಿಸಿ ಉಪ ನೋಂದಣಾ ಕಛೇರಿಗೆ ಹೋಗಿರುತಾರೆ ಕಛೇರಿ ಕೆಲಸ ಮುಗಿಸಿಕೊಂಡು ಮರಳಿ ಸಾಯಂಕಾಲ 1800 ಗಂಟೆಯ ಸುಮಾರಿಗೆ ಬಂದು ನೋಡಲಾಗಿ ನಿಲ್ಲಿಸಿದ ದ್ವಿಚಕ್ರವಾಹನವನ್ನು ಇರುವುದಿಲ್ಲ ಯಾರೊ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಜನವಾಡ ಪೊಲೀಸ ಠಾಣೆ: ಪ್ರಕರಣ ಸಂಖ್ಯೆ; 103/2022: ಕಲಂ 279 , 304(ಎ)ಐಪಿಸಿ ,187 ಐ ಮ್ ವಿ ಕಾಯ್ದೆ:

ದಿನಾಂಕ: 25/09/2022 ರಂದು 1500 ಗಂಟೆಗೆ ಫಿರ್ಯಾದಿ ಶ್ರೀ ದೇವಿದಾಸ ತಂದೆ ವಿಶ್ವಂನಾಥ ಮಚಕುರಿ ವಯ: 50 ವರ್ಷ ಜಾ: ಕೋಳಿ ಸಾ: ಹೊನ್ನಕೇರಿ ಗ್ರಾಮ ರವರು ಠಾಣೆಗೆ ಹಾಜರಾಗಿ ತಮ್ಮ ದೂರು ಸಲ್ಲಿಸಿದ್ದು ಸಾರಾಂಶವೇನೆಂದರೆ, ದಿನಾಂಕ: 25/09/2022 ರಂದು ಬೆಳಿಗ್ಗೆ 11 ಗಂಟೆ ಸುಮಾರಿಗೆ ತಾಜೋದ್ದಿನ್ ಚೊಂಡಿ ಇವನು ನನ್ನ ತಮ್ಮ ಸಿದ್ದಪ್ಪಾ ಇವನಿಗೆ ನಮ್ಮೂರ ಸರಕಾರಿ ಶಾಲೆಯ ಆವರಣದಲ್ಲಿನ ಗಿಡದ ಕಟ್ಟಿಗೆ ಕಡಿಯುವ ಸಲುವಾಗಿ ಕೂಲಿ ಕೆಲಸಕ್ಕೆ ಕರೆದುಕೊಂಡು ಹೋಗಿರುತ್ತಾನೆ. ಮಧ್ಯಾಹ್ನ 1 ಗಂಟೆ ಸುಮಾರಿಗೆ ಫಿರ್ಯಾದಿಯು ಹೊಲದಲ್ಲಿ ಇದ್ದಾಗ ಮಗ ರಾಹುಲ್ ಇವನು ಹೊಲಕ್ಕೆ ಬಂದು ಚಿಕ್ಕಪ್ಪನಾದ ಸಿದ್ದಪ್ಪಾ ಇವನಿಗೆ ಶಾಲೆಯಲ್ಲಿ ಕಟ್ಟಿಗೆ ವಾಹನದಲ್ಲಿ ತುಂಬುವಾಗ ಮೈ ಮೇಲೆ ಕಟ್ಟಿಗೆ ಬಿದ್ದು ಸತ್ತಿರುತ್ತಾನೆ ಅಂತ ತಿಳಿಸಿದ ಕೂಡಲೇ ಸರಕಾರಿ ಶಾಲೆಯ ಆವರಣದಲ್ಲಿ ಬಂದು ನೋಡಲಾಗಿ ನನ್ನ ತಮ್ಮ ಸಿದ್ದಪ್ಪಾ ಇವನ ತಲೆಗೆ ಭಾರಿ ರಕ್ತಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ಚಿಂತಾಕಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 52/2022 ಕಲಂ 87 ಕೆಪಿ ಕಾಯ್ದೆ :-

ದಿನಾಂಕ 25/09/2022 ರಂದು ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಖಚಿತ ಭಾತ್ಮಿ ಬಂದಿದ್ದೆನೆಂದರೆ ಮೆಡಪಳ್ಳಿ ಗ್ರಾಮದ ವಿಜಯಕೂಮಾರ ಪೂಜಾರಿ ರವರ ಹೋಟೇಲ ಹತ್ತಿರ ಸಾರ್ವಜನಿಕ ರಸ್ತೆಯ ಪಕ್ಕದಲ್ಲಿ ಸಾರ್ವಜನಿಕ ಖುಲ್ಲಾ ಸ್ಥಳದಲ್ಲಿ ಕೇಲವು ಜನರು ಹಣ ಹಚ್ಚಿ ಅಂದರ ಬಾಹರ ಎಂಬ ನಸುಬಿನ ಜೂಜಾಟ ಆಡುತ್ತಿದ್ದಾರೆ ಅಂತಾ ಮಾಹಿತಿ ಬಂದ ಮೇರೆಗೆ ಪಿಎಸ್ಐ ರವರು ಸಿಬ್ಬಂದಿಯೊಂದಿಗೆ ಹೋಗಿ ನೋಡಿದಾಗ ಕೇಲವು ಜನರು ಗೊಲಾಗಿ ನೇಲದ ಮೇಲೆ ಕುಳಿತು ಅಂದರ ಬಾಹರ ಎಂಬ ನಸಿಬಿನ ಜೂಜಾಟ ಆಡುತ್ತಿದ್ದನ್ನು ಖಚಿತಪಡಿಸಿಕೊಂಡು ಅವರ ಮೇಲೆ ಒಮ್ಮೆಲೆ ಪಂಚರೊಂದಿಗೆ 10;00 ಗಂಟೆಗೆ ದಾಳಿ ಮಾಡಿ ಹಿಡಿದು ಹೆಸರು ವಿಳಾಸ ವಿಚಾರಿಸಲು ಅದರಲ್ಲಿ 1.ವಿಜಯಕೂಮಾರ ತಂದೆ ಭಿಕ್ಕು ರಾಠೋಡ ವಯ;29 ವರ್ಷ ಜಾ; ಲಮಾಣಿ ಉ;ಕೂಲಿಕೆಲಸ ಸಾ;ಭಿಕ್ಕುನಾಯಕ ತಾಂಡ 350/- ರೂ 2. ರಾಜಕೂಮಾರ ತಂದೆ ಚಂದರ ವಗ್ಗೆ ಸಾ; ಮೆಡಪಳ್ಳಿ ವಯ;32 ವರ್ಷ ಜಾ;ಎಸ್.ಟಿ ಕೋಳಿ 350/- ರೂ 3.ಶಿವಾಜಿ ತಂದೆ ಪೋಮಾ ಚೌವ್ಹಾಣ ವಯ;50 ವರ್ಷ ಜಾ;ಲಮಾಣಿ ಉ; ಕೂಲಿಕೆಲಸ ಸಾ; ಮೆಡಪಳ್ಳಿ ತಾಂಡ 400/- ರೂ 4. ಏಸಪ್ಪಾ ತಂದೆ ಸಂಗಪ್ಪಾ ಮೇತ್ರೆ ವಯ;60 ವರ್ಷ ಜಾ; ಎಸ್.ಸಿ ಮಾದಿಗ

ಉ;ಕೂಲಿಕೆಲಸ ಸಾ; ಮೆಡಪಳ್ಳಿ 350/- ರೂ5. ಮುಗ್ತಪ್ಪ ತಂದೆ ಅಮೃತ ಪೂಜಾರಿ ವಯ;40 ವರ್ಷ ಜಾ; ಎಸ್.ಸಿ ಹೋಲೆಯ ಉ; ಕೂಲಿಕೆಲಸ ಸಾ; ಮೆಡಪಳ್ಳಿ 450/- ರೂ 6. ರಾಜಪ್ಪಾ ತಂದೆ ಅಮೃತ ಕೋಳಿ ವಯ; 36 ವರ್ಷ ಜಾ; ಎಸ್.ಟಿ ಕೊಳಿ ಉ;ಕೂಲಿಕೆಲಸ ಸಾ; ಮೆಡಪಳ್ಳಿ 160/- ರೂ ಹಾಗು ಎಲ್ಲರ ಮಧ್ಯದಲ್ಲಿ 52 ಇಸ್ಪೀಟ್ ಎಲೆಗಳು ಹಾಗು 850/- ರೂ ನಗದು ಹಣ ರೂಗಳನ್ನು ಹಿಗೆ ಒಟ್ಟು 2760/-ರೂ/- ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.